## ನಿಮ್ಮೊಡನೆ

# ಶುದ್ಧ ನೀರು ಐಷಾರಾಮವಲ್ಲ, ಎಲ್ಲರ ಹಕ್ಕು

**ಶುದ್ಧ ಕುಡಿಯುವ ನೀರು ಐಷಾರಾಮಿ ಬೇಡಿಕೆಯಲ್ಲ. ಅದು ವಿಶೇಷ ಸವಲತ್ತೂ ಅಲ್ಲ. ಸಂವಿಧಾನದ 21ನೇ ವಿಧಿಯ ಅನ್ವಯ ಅದು ಪ್ರತಿ ನಾಗರಿಕರ ಹಕ್ಕು. ಜನರು ಕಲುಷಿತ ನೀರಿನ ಕಾರಣಕ್ಕೆ ಸಾಲುಸಾಲಾಗಿ ಆಸ್ಪತ್ರೆಗೆ ಸೇರುವ ಪ್ರಸಂಗ ಬಂದರೆ ಅದನ್ನು ಆಕಸ್ಮಿಕ ಅಥವಾ ಅವಘಡ ಎನ್ನುವಂತಿಲ್ಲ.**

ಮಾಹಿತಿ ತಂತ್ರಜ್ಞಾನದ ಹಬ್ ಎಂಬ ಕಿರೀಟವನ್ನು ಇನ್ನೂ ಹೊತ್ತ ಬೆಂಗಳೂರು ಮಹಾನಗರದಲ್ಲಿ ಕುಡಿಯುವ ನೀರು ಕಲುಷಿತವಾಗಿರುವ ಸುದ್ದಿ ಆಗೀಗ ಮರುಕಳಿಸುತ್ತಿರುವುದು ಪ್ರಶ್ನಾರ್ಹ. ದೇಶದ ಸ್ವಚ್ಛ ಸರ್ವೇಕ್ಷಣಾ ಶ್ರೇಯಾಂಕದಲ್ಲಿ ಮೊದಲ ಸ್ಥಾನ ಪಡೆದ ನಗರ ಎನಿಸಿದ ಇಂದೋರ್‌ನಲ್ಲಿ ಕಲುಷಿತ ನೀರಿನ ಕಾರಣದಿಂದಾಗಿಯೇ ಜೀವಹಾನಿಗಳಾಗಿವೆ. ಆ ವಿದ್ಯಮಾನವು ಎಚ್ಚರಿಕೆ ಘಂಟೆ ಆಗಬೇಕು ಎಂದುಕೊಳ್ಳುವ ಹೊತ್ತಿಗೇ ಬೆಂಗಳೂರಿನ ಕೆಎಸ್‌ಎಫ್‌ಸಿ ಲೇಔಟ್ ಹಾಗೂ ಲಿಂಗರಾಜಪುರದಲ್ಲಿ ಅನೇಕರು ವಾರದ ಕಾಲ ಟ್ಯಾಂಕರ್ ನೀರಿನ ಮೊರೆಹೋಗಬೇಕಾಯಿತು. ಮನೆಗಳ ನಲ್ಲಿಗಳಲ್ಲಿ ಕಲುಷಿತ ನೀರು ಬರುತ್ತಿದೆ ಎಂದು ಅವರು ದೂರು ನೀಡಿ ದಿನಗಳೇ ಉರುಳಿದರೂ ಪರಿಹಾರ ಸಿಕ್ಕಿರಲಿಲ್ಲ. ವಾಂತಿ, ಭೇದಿ, ಅಜೀರ್ಣ, ಹೊಟ್ಟೆನೋವಿನಿಂದ ಆ ಪ್ರದೇಶಗಳ ಅಸಂಖ್ಯ ಜನರು ನರಳಿದರು. ಜಿಬಿಎ ಚುನಾವಣೆಯನ್ನು ಈ ವರ್ಷದ ಮೊದಲ ಅರ್ಧ ಭಾಗದೊಳಗೆ ಮುಗಿಸುವಂತೆ ಸುಪ್ರೀಂ ಕೋರ್ಟ್ ತಾಕೀತು ಮಾಡಿದೆ. ಆಗ ಸ್ಥಳೀಯ ಆಡಳಿತ ಯಂತ್ರವೊಂದು ವ್ಯವಸ್ಥಿತವಾಗಿ ಮರುಹುಟ್ಟು ಪಡೆದುಕೊಳ್ಳುತ್ತದೆ ಎಂದು ಭಾವಿಸೋಣ. ಆದರೆ, ಅದು ಇಲ್ಲದ ಹೊತ್ತಿನಲ್ಲೂ ಜನರ ನೀರಿನ ಸಮಸ್ಯೆ ಬಗೆಹರಿಸಬೇಕಾದುದು ಜಲಮಂಡಳಿಯವರ ನೈತಿಕ ಕರ್ತವ್ಯ.

ಕಾವೇರಿ ನೀರು ಹರಿದುಬರುವ ಪೈಪುಗಳಲ್ಲಿ ಬಿರುಕು ಮೂಡಿದರೆ ಅದಕ್ಕೆ ಚರಂಡಿ ನೀರು ಬೆರೆತುಕೊಳ್ಳುತ್ತದೆ. ಮಹಾನಗರದ ಚರಂಡಿಯಲ್ಲಿನ ನೀರಿನಲ್ಲಿ ದೇಹಕ್ಕೆ ಹಾನಿಯುಂಟುಮಾಡಬಲ್ಲ ಅದೆಷ್ಟು ಅಂಶಗಳಿರುತ್ತವೆ ಎನ್ನುವುದರ ಅರಿವು ಆಡಳಿತ ಚುಕ್ಕಾಣಿ ಹಿಡಿದವರಿಗೆ ಇರಬೇಕು.


ಕಳೆದ ವರ್ಷ ನವೆಂಬರ್ ತಿಂಗಳಲ್ಲಿ ಪ್ರೆಸ್ಟೀಜ್ ಫಾಲ್ಕನ್ ಸಿಟಿಯ ಎಂಟು ವರ್ಷದ ಬಾಲಕನೊಬ್ಬ ಮೃತಪಟ್ಟ. ಅವನ ಸಾವಿಗೆ ಕಲುಷಿತ ನೀರೇ ಕಾರಣ ಎಂಬ ಶಂಕೆ ವ್ಯಕ್ತವಾಗಿತ್ತು. ಆಗಲೂ ನಾಗರಿಕರು ಎಚ್ಚೆತ್ತುಕೊಳ್ಳುವಂತೆ ಮನವಿ ಮಾಡಿದ್ದರು. ಆ ನೆನಪು ಮಾಸುವ ಮೊದಲೇ ಲಿಂಗರಾಜಪುರ ಹಾಗೂ ಕೆಎಸ್‌ಎಫ್‌ಸಿ ಲೇಔಟ್‌ನಲ್ಲಿ ನೀರು ಕಲುಷಿತಗೊಂಡು ಜನ ಪರದಾಡಿದರು. ಅದಾದ ನಂತರ ಸೋರುತ್ತಿದ್ದ ಪೈಪುಗಳನ್ನು ಸರಿಪಡಿಸಲಾಗಿದೆ ಎಂದು ಎಂಜಿನಿಯರುಗಳು ಹೇಳಿದರು. ಆದರೂ ಸಮಸ್ಯೆಯ ಸುಳಿವು ಸಿಕ್ಕ ದಿನಗಳ ನಂತರವೂ ಈ ಪರಿಯ ನಿರ್ಲಕ್ಷ್ಯ ಒಪ್ಪತಕ್ಕದ್ದಲ್ಲ.

ನಲವತ್ತು ವರ್ಷಗಳ ಹಿಂದೆ ನಿರ್ಮಿತವಾಗಿದ್ದ ಮನೆಯೊಂದರಲ್ಲಿ ಆಗ ಬಳಸುತ್ತಿದ್ದ ಗ್ಯಾಲ್ವನೈಸ್ಡ್ ಕಬ್ಬಿಣದ ಪೈಪು ಹಾಕಲಾಗಿತ್ತು. ಅದು ತುಕ್ಕು ಹಿಡಿದು, ಸೋರಿಕೆ ಉಂಟಾಗಿದ್ದೇ ನೀರು ಕಲುಷಿತಗೊಳ್ಳಲು ಕಾರಣ ಎನ್ನುವುದನ್ನು ಜಲಮಂಡಳಿ ಎಂಜಿನಿಯರುಗಳು ರೋಬೊ ತಂತ್ರಜ್ಞಾನದ ಮೂಲಕ ಪತ್ತೆ ಮಾಡಿದರು. ಕೆಲವು ವರ್ಷಗಳ ಹಿಂದೆ ಮಳೆಗಾಲದಲ್ಲಿ ಕಲುಷಿತ ನೀರು ಪೂರೈಕೆ ಆಗುವ ಸಮಸ್ಯೆ ಅಲ್ಲಲ್ಲಿ ತಲೆದೋರುವುದು ಸಾಮಾನ್ಯವಾಗಿತ್ತು. ಈಗ ಚಳಿಗಾಲದಲ್ಲಿಯೇ ಆ ಪರಿಸ್ಥಿತಿ ತಲೆದೋರಿರುವುದು, ಸಮಸ್ಯೆ ಬೇರಿನಲ್ಲಿದೆ ಎನ್ನುವುದಕ್ಕೆ ಕನ್ನಡಿ ಹಿಡಿಯುತ್ತದೆ. ಹಳತಾದ ಪೈಪುಗಳನ್ನು ನಿಯಮಿತವಾಗಿ ಬದಲಿಸುವುದು ಮೊದಲಿಗೆ ಆಗಬೇಕಾದ ಕೆಲಸ. ನಗರದ ಸಾರ್ವಜನಿಕ ಮೂಲಸೌಕರ್ಯ ಕಾಮಗಾರಿಗಳು ಈಗೀಗ ಸಂಕೀರ್ಣ ಎನಿಸತೊಡಗಿವೆ. ಗಡುವಿನೊಳಗೆ ಯಾವುದೂ ಮುಗಿಯುವುದಿಲ್ಲ ಎನ್ನುವುದೇ ವಾಸ್ತವ. ಹೀಗಾಗಿ ನೀರಿನ ಸ್ವಚ್ಛತೆ ಕಾಪಾಡುವುದು ಇನ್ನೂ ದೊಡ್ಡ ಸವಾಲಾಗಿದೆ.

ನೀರು ಪೂರೈಕೆ ಪೈಪುಗಳು ಚರಂಡಿಗೆ ಹೊಂದಿಕೊಂಡಂತೆಯೇ ಈಗಲೂ ಇರುವುದು ಒಪ್ಪತಕ್ಕದ್ದಲ್ಲ. ಮೊದಲಿಗೆ, ಇದನ್ನು ಸರಿಪಡಿಸುವ ಜರೂರು ಇದೆ. ರೋಬೊ ತಂತ್ರಜ್ಞಾನದಿಂದ ಸಮಸ್ಯೆಯ ಬೇರುಗಳನ್ನು ಅರಿಯಬಹುದಾಗಿದೆ ಎನ್ನುವುದಕ್ಕೆ ಲಿಂಗರಾಜಪುರದ ಉದಾಹರಣೆ ದೊರೆತಿದೆ. ಎಲ್ಲೆಲ್ಲಿ ದಶಕಗಳ ಹಿಂದಿನ ಗ್ಯಾಲ್ವನೈಸ್ಡ್ ಕಬ್ಬಿಣದ ಪೈಪುಗಳು ಇವೆಯೋ ಅವನ್ನು ಬದಲಿಸಿ ಡಕ್ಟೈಲ್ ಕಬ್ಬಿಣದ ಪೈಪುಗಳನ್ನು ಹಾಕುವ ಅಭಿಯಾನದ ಅಗತ್ಯವಿದೆ. ನಾಗರಿಕರೂ ತಮ್ಮ ಮನೆಯ ಪೈಪುಗಳು ದಶಕಗಳಷ್ಟು ಹಳತಾಗಿದ್ದಲ್ಲಿ ಬದಲಿಸಿಕೊಳ್ಳುವ ನಿರ್ಧಾರ ಕೈಗೊಳ್ಳಬೇಕು.

ಶುದ್ಧ ಕುಡಿಯುವ ನೀರು ಐಷಾರಾಮಿ ಬೇಡಿಕೆಯಲ್ಲ. ಅದು ವಿಶೇಷ ಸವಲತ್ತೂ ಅಲ್ಲ. ಸಂವಿಧಾನದ 21ನೇ ವಿಧಿಯ ಅನ್ವಯ ಅದು ಪ್ರತಿ ನಾಗರಿಕರ ಹಕ್ಕು. ಜನರು ಕಲುಷಿತ ನೀರಿನ ಕಾರಣಕ್ಕೆ ಸಾಲುಸಾಲಾಗಿ ಆಸ್ಪತ್ರೆಗೆ ಸೇರುವ ಪ್ರಸಂಗ ಬಂದರೆ ಅದನ್ನು ಆಕಸ್ಮಿಕ ಅಥವಾ ಅವಘಡ ಎನ್ನುವಂತಿಲ್ಲ. ಹಾಗೆ ಆಗದಂತೆ ನೋಡಿಕೊಳ್ಳುವುದು ಆಡಳಿತದ ನೈತಿಕ ಹೊಣೆಗಾರಿಕೆ ಎಂದೇ ಸುಪ್ರೀಂ ಕೋರ್ಟ್ ಹೇಳಿದೆ. ಬೇಸಿಗೆಯ ಅಂಚು ಹಾಗೂ ಮುಂಗಾರು ಪ್ರಾರಂಭದಲ್ಲಿ ಡೆಂಗಿ ಉಲ್ಬಣಗೊಳ್ಳುವ ಸಾಧ್ಯತೆ ಹೆಚ್ಚು. ಆ ಹೊತ್ತಿಗಾದರೂ ಕಲುಷಿತ ನೀರಿನ ಸಮಸ್ಯೆ ಪೂರ್ಣ ಪ್ರಮಾಣದಲ್ಲಿ ಬೆಂಗಳೂರಿನಲ್ಲಿ ಇಲ್ಲದಂತೆ ನೋಡಿಕೊಳ್ಳುವುದು ಆದ್ಯತೆಯಾಗಲಿ.

**■ ವಿಶಾಖ ಎನ್.**



ವಿಜಯ